ಶ್ರೀ

ಲಕ್ಷ್ಮೀ-ಸರಸ್ವತಿ ಸಂವಾದ

[ವಾರ್ಧಿಕ್ಯ ಷಟ್ಪದಿ]

ಲೇಖಕರು:

ಯಸ್. ಯನ್. ಕೃಷ್ಣಶಾಸ್ತ್ರಿ.

೧೯೬೦

ಬೆಲೆ: ೨೫ ನ. ಪೈಸೆ

ಶ್ರೀ

ಲಕ್ಷ್ಮೀ-ಸರಸ್ವತಿ ಸಂವಾದ

[ವಾರ್ಧಿಕ್ಯ ಷಟ್ಪದಿ]

ಲೇಖಕರು:

ಯಸ್. ಯನ್. ಕೃಷ್ಣಶಾಸ್ತ್ರಿ.

೧೯೬೦

ಬೆಲೆ: ೨೫ ನ. ಪೈಸೆ

ದ್ವಿತೀಯ ಆವೃತ್ತಿ—೨೦೦೦ ಪ್ರತಿಗಳು

ಶ್ರೀ ವಿವೇಕಾನಂದ ಪ್ರೆಸ್, ಮೂಡುಬಿದ್ರಿ, ದ. ಕ.



ಶ್ರೀ ಯಸ್. ಯನ್. ಕೃಷ್ಣಶಾಸ್ತ್ರಿ.

ಮುನ್ನುಡಿ

ಎಲ್ಲಿರ್ದೆಯೋ **ವಾಣಿ** ಫುಲ್ಲಜಾತನ ರಾಣಿ?
ಕಲ್ಲೆದೆಯ ತೋರಿರ್ದು ಸೊಲ್ಲಡಗಿ ಮಲಗಿರ್ದೆ!
ಶಂಕರಗೆ ಸೋತು ನೀ ಕಿಂಕರೀಯಂತಿರ್ದೆ!
ಕೊಲ್ಲೂರ **ಮೂಕಾಂಬಿ**ಯಲ್ಲವೇ ನೀ ಅಂಬೆ! ||ಎಲ್ಲಿರ್ದೆ||

ಸಾಕಿನ್ನು ಘನತಾಯೆ, ಸಾಕು ಮೌನದ ಛಾಯೆ!
ತಲ್ಲಣಿಸಿ ಜಗವೆಲ್ಲ ಹಾರೈಪ ಬಗೆ ಬಲ್ಲೆ!
ಇನ್ನೊಮ್ಮೆ ದಯವಿತ್ತು, ಪುಣ್ಯಭೂಮಿಯ ಸುತ್ತು ।
ಬಾಯ್ದೆರೆಯಬಾರದೇ, ಮುದ್ದು ಕರ್ನಾಟ ಶಾರದೇ! ||

ಝೇಂಕರಿಸು ವೀಣೆಯಿಂದೋಂಕಾರ ವಾಣಿಯಂ!
ನಲಿಯಲೀ ನರ್ತನದಿ ನವಿಲು ಸದ್ವರ್ತನದಿ!
ಕವಿವೃಂದದೊಡಗೂಡಿ ಭಾವದಿಂದರ್ಚಿಪರ ।
ಭಾವನೆಯ ಕೈಕೊಂಡು ಕಾವ್ಯಗಳನಾಲಿಸೇ! ||

ಕವಿ ಕೃಷ್ಣ ಬಂದಿಹನು ನವಕಾವ್ಯ ತಂದಿಹನು ।
ಸ್ವೀಕರಿಸು ನೀ ಮಾತೆ ತ್ರಿಜಗದ್ವಿಖ್ಯಾತೆ! ||

ಇಂದಿರೆಯ ವರವೊಲ್ಲ, ನಿನ್ನಡಿಯ ಬಲ ಬಲ್ಲ!
ಇಂದಿರೆಯ ಬಲ ಹಿಂದೆ, ನಿನ್ನೊಲುಮೆ ಬಲ ಮುಂದೆ ।
ನಿನ್ನೊಲುಮೆ ಬರಲೆಂದು, ನಿನ್ನನೋಲೈಸಿ ಬಂದು ।
ನಿನ್ನಡಿಯ ಸೇರಿಹನು, ಮುನ್ನುಸುರು ವರವನು! ||

ಅಣ್ಣಾಜಿ.

ಪ್ರಸ್ತಾವನೆ

ಕನ್ನಡ ಭಾಷಾಭಿಮಾನಿಗಳೇ,

"ಶ್ರೀ ಲಕ್ಷ್ಮೀ ಸರಸ್ವತಿ ಸಂವಾದ"ವೆಂಬ ಈ ಚಿಕ್ಕ ಪುಸ್ತಕವು ದ್ವಿತೀಯ ಮುದ್ರಣವಾಗಿರುತ್ತದೆ. ಇದು ವಾರ್ಧಿಕ್ಯ ಷಟ್ಪದಿಯಲ್ಲಿದೆ. ಸುಲಭ ಶೈಲಿಯ ಕಾವ್ಯವು. ಈ ಸಂಭಾಷಣೆಯ ರಹಸ್ಯವೇನೆಂದರೆ, ಲಕ್ಷ್ಮಿ ಅಂದರೆ ರೊಕ್ಕ, ಸರಸ್ವತಿ ಅಂದರೆ ವಿದ್ಯೆ, ಇವರಿಬ್ಬರೊಳಗೆ ನಡೆದಿರುವ ವಿವಾದ. ತಾನು ಮೇಲು, ತಾನು ಮೇಲು ಎಂಬುದಾಗಿ ಹೊಗಳಿಕೊಳ್ಳುವುದು. ಕೊನೆಗೆ ಸರಸ್ವತಿಯೇ ಗೆಲ್ಲುತ್ತಾಳೆ. ಸುವಿಚಾರವುಳ್ಳ ಪುಸ್ತಕವು, ಸ್ವಾರ್ಥತ್ಯಾಗದ ಗ್ರಂಥ. ಇದನ್ನೋದಿ ತಿಳಕೊಳ್ಳುವ ವಿಚಾರ ತುಂಬಾ ಇದೆ.

ಈ ಚಿಕ್ಕ ಪುಸ್ತಕವನ್ನು ಅಚ್ಚುಮೆಚ್ಚಾಗಿ ಮುದ್ರಿಸಿಕೊಟ್ಟಿರುವ ಶ್ರೀ ವಿವೇಕಾನಂದ ಮುದ್ರಣಕಾರರಿಗೆ ನನ್ನ ಚಿರಸ್ಮರಣೀಯವಾದ ವಂದನೆಗಳು. ಕನ್ನಡಿಗರೆಲ್ಲರೂ ಇದನ್ನೋದಿ ಸಂತೋಷಪಡುವರೆಂದು ಆಶಿಸುವ,

ಶಿವಮೊಗ್ಗ,
ತಾ. ೬—೫—೧೯೬೦

ಸ. ನಾ. ಕೃಷ್ಣಶಾಸ್ತ್ರಿ.

ಲಕ್ಷ್ಮೀ-ಸರಸ್ವತಿಯರ ಸಂವಾದ

ಲಕ್ಷ್ಮಿ—

ವಾಣಿಯೇ ಕೇಳು ನಾನೆಂಭತ್ತು ಲಕ್ಷ ಘನ ।
ಯೋನಿಗಳಲುದಿಸಿರ್ಪ ಪ್ರಾಣಿಗಳಿಗನುದಿನವು ।
ತ್ರಾಣೆಯಾಗಿರುವೆನೀ ಜಗದ ವಸ್ತುಗಳೆಲ್ಲವೆನ್ನಿಂದ ಬಾಳುತಿಹವು ॥
ಜಾಣೆ ನೀನಾದರೇನಾಯ್ತವ್ವ ನಿನ್ನೊಲುಮೆ ।
ಮಾನವರೊಳಡಗಿಲ್ಲ ನಿನ್ನ ವಿದ್ಯೆಯ ಕಲಿತ ।
ಜ್ಞಾನದಿಂದುದರವನು ಹೊರಬಹುದೆ ಕೇಣವಿಲ್ಲವೆ ನಿನಗೆ ಶಾರದಾಂಬೆ ॥೧॥

ನಿಂತಿರಲು ನಾ ಬೇಕು ಕೂತಿರಲು ನಾ ಬೇಕು ।
ಚಿಂತೆಯ ನಿವಾರಿಸಲು ನಾ ಬೇಕು ನೋಡವ್ವ ।
ಪಂಥವನು ಕಟ್ಟಿ ಜೂಜಾಡುವರೆ ಬೇಕು ನಾ ಸಂತೆಗಳ ಸರಕುಗಳಿಗೆ ॥
ಕಂತೆ ಹರಿಕಥೆಯಿಂದ ಸಂತಸದೊಳೆನ್ನಿಂದ ।
ಬೊಂತೆಯಾಗಲು ಬೇಕು ಭೂಮಿಪರ ಸನ್ನಿಧಿಯ ।
ದಂತಿಹಯವಾಹನಂಗಳಿಗೆಲ್ಲ ನಾ ಬೇಕು ನೀನಾವ ನರಗೆ ಬೇಕು ॥೨॥

ಶಾಂತಿ ಸುಖವನು ಕೊಡುವ ಮನೆಗಳನು ಕಟ್ಟುವರೆ ।
ಭ್ರಾಂತಿಯನು ಪೋಗಲಾಡಿಸಿ ಸದಾನಂದದ ವಿ ।
ಶ್ರಾಂತಿಯನು ಹೊಂದಿ ಶಾಂತತೆಯೊಳಿರೆ ಬೇಕು ನಾ ಪಾಂಥರಿಗೆ ಬೇಕಲ್ಲವೆ ॥
ಕಾಂತೆಯರ ಮುಖಗಳನಲಂಕರಿಸಿ ತಳತಳಿಪ ।
ಕಾಂತಿಯನ್ನೀಯುವವರಾರೆಲ್ಲ ಪ್ರಾಂತ ವೃ ।
ತ್ತಾಂತಗಳ ತಿಳಿಸುವರೆ ನಾ ಬೇಕು, ನೀನಾರಿಗಾದೆಯೆಲೆ ಶಾರದಾಂಬೆ ॥೩॥

ಸರಸ್ವತಿ—

ಚಪಲೆಯೇ ಲಾಲಿಸೌ ನಿನ್ನಿಂದ ವಿಪ್ರರಿಗೆ ।
ಜಪತಪದ ಬಲವಿಲ್ಲದಪರಾಧಗಳು ಪೆರ್ಚಿ ।
ಕಪಟದಿಂದಪಹಾಸ್ಯದಿಂ ಕ್ಷಿತಿಯು ವಿಪರೀತ ದುಃಖದಿಂ ತೇಲುತಿಹುದು ॥
ಕುಪಿತೆಯಲ್ಲವೆ ನೀನು ಶಮದಮದ ಗುಣವೆಲ್ಲಿ ।
ವಿಪುಲವಾಗಿದ್ದಲ್ಲಿ ಕೃಪಣೆಯಾಗಿರ್ಪೆ ಜನ ।
ಕುಪಕಾರ ಮತಿಯಿಲ್ಲ ಸಫಲವೇನಪರೂಪ ನರಜನ್ಮವನು ಕೆಡಿಸಿದೆ ॥೪॥

ಆವನಿಗೆ ಸದ್ವಿದ್ಯೆ, ಸುಜ್ಞಾನ, ಸುಗುಣ, ತಪ ।
ದೇವಭಕ್ತಿಯು, ಸದಾ ಸದ್ಧರ್ಮ, ಶೀಲ, ಸ್ವ ।
ಭಾವನೆಯು ದಾನದಿಂದೊದಗದವ ಬದುಕಲೇಕೆ ನರರೂಪವನು ತಾಳಿ ॥
ಈ ವಿಧದ ಸುಗುಣಗಳನಿತ್ತು ನಾನಜ್ಞಾನ ।
ಭಾವನೆಗಳನು ವಧಿಸಿ ಪಾಪೌಘ ದೇಹವನು ।
ಬಾವುಕನ ಕಾವೆನೀ ಧಾತ್ರಿಯೊಳು ಜಂತು ಚಿರಕಾಲ ಬಾಳುವಂತೆ ॥೫॥

ಅದಕಾಗಿ ಜನರೆನ್ನ ಶ್ರದ್ಧೆಯಿಂ ಪೂಜಿಪರು ।
ಮೊದಲಿಂದ ಬುಧಗಣಕೆ ನಾನೊಲಿದು ಭಕುತಿಯನು ।
ಚದುರತನವನು ಕೊಡುವೆ ಸದಮಲನ ನೆನೆವಂತೆ ಬದಲೇಕೆ ನೀನಾಡುವೆ ॥
ಮದವೇರಿ ಧನದ ಬಲದಿಂದ ಕಣ್ಣೆತ್ತಿ ಶ್ರೀ ।
ಬುಧವರರ ಸತ್ಕರಿಸಿ ಕಾಂಬುವವರಿಲ್ಲ ಜನ ।
ರಧೋಗತಿಯು ಪಥವನು ನೋಡುತ್ತ ಬಳಲುವರು ಮೋಕ್ಷದಾರಿಯ ಕಾಣದೆ॥೬॥

ಲಕ್ಷ್ಮಿ—

ವೃತ್ತಿಯನು ಸಾಹಸದಿ ಮಾಡುವಗೆ ಬೇಕಾದ ।
ವಿತ್ತವನ್ನೀಯುವೆನು ಭೋಗಿಸುವರದರಿಂದ ।
ಮುತ್ತು ನವರತನದಿಂ ಕೆತ್ತಿರುವ ಸರಪಣಿಯ ಕುತ್ತಿಗೆಯೊಳಿಟ್ಟಿರುವರು ॥

ಎತ್ತರದ ಕೋಟಿ ಕೊತ್ತಳಗಳನು ಕಟ್ಟಿ ಯುಗ ।
ವೃತ್ತ ಕುಚೆಯರೊಳಿದ್ದು ಸಂಭೋಗ ಹರುಷ ಸಂ ।
ಪತ್ತಿನಿಂ ರಾಜಾದಿ ರಾಣಿಯರು ಮೆರೆಯುವುದ ಕಾಂಬೆಯಲ್ಲವೆ ಶಾರದೆ ||೭||

ನಿನ್ನ ಬಲವಿದ್ದ ಮೇಲೆನ್ನನೇಕೊಪ್ಪುವರು ।
ಜೆನ್ನೇರಿ ಬರುತಿಹರು ಕೋವಿದರು ಧನಕಾಗಿ ।
ಅನ್ನಪಾನಾದಿಗಳನೀಯುವವರಾರಮ್ಮ ನಾನಲ್ಲದಿನ್ನಾರು ಜೇರೆ ॥
ಉಣ್ಣುವರು ತರತರ ಪದಾರ್ಥಗಳ ತೆಗೆದೆತ್ತಿ ।
ತಿನ್ನುವರು ನಸುನಗೆಯ ಕುಶಲದಿಂ ಪಾಡುತಿಹ ।
ರೆನ್ನ ಪೆಸರಿಂದ ಜನರೆಲ್ಲ ಬಾಳುವರು ನಾನಿರಲು ನೀನೇಕೆ ಜರಿವೆ ||೮||

ಎಲ್ಲಿ ನೋಡಿದೊಡಲ್ಲಿ ವಾಸಿಸುವೆನೆಲ್ಲ ಕಡೆ ।
ಯಲ್ಲಿರುವೆ ಮರೆತು ನಾನಲ್ಲಲ್ಲಿ ಪೂಜಿಸುವ ।
ರಲ್ಲಿ ಮಾಡಿದುಪಕಾರವನು ಮರೆಯದಿರುವವರಲ್ಲಿ ದಾನಪರರಲ್ಲಿ ॥
ಒಳ್ಳಿತದ ಕೆಲಸವನು ಮಾಡುವವರಲ್ಲಿ ನಾ ।
ನಲ್ಲಿಹೆನು ಪರನಿಂದೆ ಮಾಡದಿರುವವರಲ್ಲಿ ।
ಬೆಲ್ಲದಂತಿರುವ ವಚನಗಳನಾಡುವವರಲ್ಲಿ ನೆಲಸಿರ್ಪೆ ನಾ ಶಾರದೆ ||೯||

ಶಾರದೆ—

ಚಂಚಲಾಕ್ಷಿಯೆ ಕೇಳು ನಿನ್ನಂತರಂಗವನು ।
ಮುಂಚೆ ನಾನರಿತಿಹೆನು ವಂಚಿಸುತ ಸಾಧುಗಳ ।
ಲಂಚಖೋರರಿಗೆ ಹಿತೆಯಾಗಿದ್ದು ಮಿಂಚಿ ಪ್ರಪಂಚದೊಳು ಸಂಚರಿಸುವೆ ॥
ಪಂಚಪಾಂಡವರೆಲ್ಲ ರಾಜ್ಯವಂ ಕಳೆವಾಗ ।
ಮಂಚದಡಿಯೊಳಗವಿತು ಮಲಗಿದೆಯೊ ಭಾರ್ಗವೀ ।
ಹಂಚಿಸದೆ ರಾಷ್ಟ್ರವನು ಸುಮ್ಮನೇಕಿಪ್ಪವರನಟ್ಟಿಸಿದೆ ಘೋರ ಜನಕೆ ||೧೦||

ಮಾಘಕವಿವರ ಕಾಳಿದಾಸಾದಿ ಭಾರವಿ ಅ ।
ಮೋಘ ಪಾಂಡಿತ್ಯವಂ ಪಡೆದವರು ನನ್ನಿಂದ ।
ರಾಗದಿಂ ಪಾಡಿ ಕರ್ಣಾನಂದ ಮಾಡಿರುವ ಗಾಯಕರಿಗಾನಲ್ಲವೆ ॥
ಬಾಗಿ ನಮಿಸುವರು ಚೆನ್ನಾಗಿ ತಲೆದೂಗಿ ಕಲೆಗೆ ।
ಶ್ರೀಗೆ ತದನಂತರಂ ಮಾನವಲ್ಲವೆ ಮರುಳೆ ।
ಆಗದಾಗದು ಜೋಡು ಸಮನಾಗಿ ನಿನಗೆನಗೆ ಸುಮ್ಮಗಿರು ಲೋಕಮಾತೆ
॥೧೧॥

ವಿದ್ಯೆಯನು ಕಲಿತವನು ಸರ್ವತ್ರ ರಾಜಸಾ ।
ನ್ನಿಧ್ಯದಲಿ ಸಜ್ಜನರ ಮಧ್ಯದಲಿ ಪೂಜ್ಯನಹ ।
ನುದ್ಯೋಗದಿಂದ ಲಕ್ಷೋಪಲಕ್ಷ ಜನ ಜೀವಿಸುವರೆನ್ನ ಬಲದಿಂದ ॥
ಪದ್ಯವಂ ಬರೆಯುವರು ನೆನೆದೆನ್ನ ಚೌಷಷ್ಠಿ ।
ವಿದ್ಯೆಗಳಿಗೆಲ್ಲ ಮೂಲತಳವೆನ್ನಲ್ಲಿ ನೀ ।
ಮದ್ಯಪಾನರಿಗೆ ಚೋರರಿಗೆ ವೇಶ್ಯೆಯರ ಮನೆಗಳಿಗೆ ಸಖಿಯಾಗಿ ಮೆರೆವೆ
॥೧೨॥

ಲಕ್ಷ್ಮಿ—

ಹೊಗೆಬಂಡಿಯೊಳು ಕೂತು ದೇಶಗಳನಲೆಯುತ್ತ ।
ಬಗೆಬಗೆಯ ವೈಭವವ ಕಂಡು ಬಹರೆನ್ನಿಂದ ।
ಗಗನದಲಿ ತಿರುಗಿ ಯಾನದಿಂದಿಳಿಯುವರು ಹೊಗಳಿಕೊಂಬುವುದೇಕೆ ವಾಣಿ ॥
ಪಗೆತನವ ಬಳಸುವರು ನಿನ್ನ ಘನ ಪಂಡಿತರು ।
ರಗಳೆ ಹಚ್ಚುವೆ ಮೇಲು ನಾ ಕೀಳು ನೀನೆಂದು ।
ಜಗಳಕಂಟಕಿಯಂತೆ ನಗುಮೋರೆಯಿಂ ನಗಿಸಿ ಜಗದೊಳಗೆ ಮಿಗಿಲೆನಿಸಿದೆ
॥೧೩॥

ಗುಡಿಯ ಪೂಜಾರಿ ಮಡಿಬಟ್ಟೆಗಳನುಟ್ಟು ಗಡ ।
ಬಡನೆ ಗಂಟೆಯನು ಬಾರಿಸುತ ಮಂತ್ರವನು ತಾ ।
ನುಡಿದಂತೆ ತಂತ್ರದಿ ತುಟಿಗಳೆರಡರಿಂ ಮಣಮಣನೆ ನಟಿಸಿ ಸುಲಿವರೆನ್ನ ॥

ಬಡತನದ ದೇಹಹೀನರು ಜೇಷಿ ಬಿಡದೆ ತ ।
ನ್ನೊಡಲುಗಳ ಪೋಷಿಸುವರೆನ್ನಿಂದ ಜಡಮತಿಯೆ ।
ದೃಢಮನದಿ ಪೇಳುವೆನು ಪ್ರೌಢವಿಗಾಧಾರಿ ನಾನಿರುವ ತನಕ ನೀನೇಕೆ
॥೧೪॥

ಬರಗಾಲ ಬರುತಿರಲು ಭೂಕಂಪವಾಗಿರಲು ।
ಕೆರೆಕುಂಟೆ ಬತ್ತಿರಲು ಬಿರುಗಾಳಿ ಬೀಸಿರಲು ।
ನೆರೆ ತುಂಬಿ ಪುರವಳಿಯೆ ಗಗನಧರೆಯೊಂದಾಗಿ ತರಣಿಯೇ ಮೂಡದಿರಲು ॥
ನರರೆನ್ನ ಬಳಿಬಂದು ಕರಜೋಡಿ ನಿಂತಾಗ ।
ಬರುವ ಸಂಕಷ್ಟಗಳ ಪರಿಹರಿಸುವವರಾರು ।
ಧರೆಗೆ ನಾನರಸಿ ನೀನರಿತುಕೋ ತಿಳಿತಿಳಿದು ಮರುಮಾತನೇಕಾಡುವೆ ॥೧೫॥

ಶಾರದೆ—

ಆರೆಂದು ತಿಳಿದೆ ನಾ ವಿಧಿ ಸತಿಯು ಬುಧವರರು ।
ಕೋರಿದ ಮಹಾತತ್ವಗಳನೆಲ್ಲ ಬೋಧಿಸಿದೆ ।
ನಾರಿಯರು ಪತಿವೃತಾ ಧರ್ಮವನು ಕೇಳಿರಲು ಬರೆದಿಟ್ಟೆ ಗ್ರಂಥಗಳನು ॥
ನಾರದರು ವಾಲ್ಮೀಕಿ ಕಣ್ವಋಷಿಗಳು ಬಿಡದ ।
ಪಾರ ಮಹಿಮೆಯ ಹೊಂದಿ ಬಾಳಿದ್ದುದೆನ್ನಿಂದ ।
ಪಾರಮಾರ್ಥದಿ ಧರಣಿಗುಪಕಾರವನು ತೋರಿಸಿದೆ ಸಾರತ್ತ ಕಡೆಗೆ ॥೧೬॥

ತಾಳಲಾರದೆ ತನ್ನ ಹೆಂಡತಿಯ ಉಪಟಳವ ।
ಕಾಳಿದಾಸನು ಬಹಳ ತಾಪದಿಂದಾವೂರ ।
ಕಾಳಿದೇವಿಯ ಮಂದಿರದೊಳಿದ್ದು ಭೋಜನವ ತೊರೆದೆನ್ನ ಗೋಳಿಟ್ಟನು ॥
ಶೀಲೆ ಗುಣವತಿಯಾದ ನಾ ದರುಶನವ ಕೊಟ್ಟು ।
ನಾಲಗೆಯ ಪಿಡಿದೆಳೆದು ನಾಕಕ್ಷರವ ಬರೆದೆ ।
ಜೋಳನಾಗಿದ್ದವನು ಕವಿಶ್ರೇಷ್ಠನಾದನವ ಚಂದ್ರಾರ್ಕರಿರುವ ತನಕ ॥೧೭॥

ಮಂದವಿದ್ಯಾಶರಧಿ ನಿನ್ನೆಡೆಗೆ ಬಂದವನು ।
ಬಂದ ಬಹು ಚಿಂತೆಯನ್ನೊಪ್ಪಿಸಲು ಮರಳಿ ನೀ ।
ನಿಂದು ಬಾ ನಾಳೆ ಬಾಯೆಂದೆನುತ ತಿರುಗಿಸುವೆ ಹುದದಿ ಮಂದಮತಿಯಿಂದ ॥
ಮಂದ ಸೌಭಾಗ್ಯವತಿ ನೀನೇನು ಫಲವು ಪೊದ ।
ಬಂದ ಮಾತನು ಮರೆತು ತಂದಿಡುವೆ ದುಃಖವನು ।
ಚಂದವೇನಿದು ನಿನಗೆ ದಯೆ ಬಾರದೇಕೆ ಬುಧಸಮೂಹಕೆ ಲೋಕಜನನಿ ॥೧೮॥

ಲಕ್ಷ್ಮೀ—

ರೊಕ್ಕವನ್ನಾರ್ಜಿಸುತ ಕೂಡಿಟ್ಟು ಹೂತಿಟ್ಟು ।
ಲಕ್ಕಪತಿಯಾದವನು ದೊಡ್ಡವನು ತನ್ನ ವಂ ।
ಶಕ್ಕೆ ಭೂಷಿತನು ಬಹು ದೊಡ್ಡ ಪಂಡಿತನು ಶಾಸ್ತ್ರಜ್ಞ ಗುಣವಂತನವನೆ ॥
ಕಿಕ್ಕಿರಿದು ಬರುತಿಹರು ಬುಧರು ಧನಿಕನ ದರುಶ ।
ನಕ್ಕೆ ಧನವ ಸಂಪಾದಿಸುವುದಕೆ ಲೋಕದ ಶು ।
ಭಕ್ಕೆ ಸರ್ವ ಗುಣಗಳು ಧನವನಾಶ್ರಯಿಸುವುವು ಲೆಕ್ಕಿಸುವರಾರು ನಿನ್ನ ॥೧೯॥

ವೇದಾಂಗಗಳ ಕಲಿತು ಶಾಸ್ತ್ರಗಳನೋದಿ ಲಂ ।
ಕಾಧಿಪತಿ ರಾವಣನು ಜಾನಕಿಯನೊಯ್ದುವಳ ।
ಬಾಧಿಸಿದನದು ಹೇಗೆ ಪೇಳು ಶಾರದೆ ನಿನ್ನ ದುರ್ಬೋಧೆಯಿಂದಲ್ಲವೆ ॥
ಮಾದಕವ ಬೆರಸಿದೆಯೊ ಕಲೆಯೊಳಗುಪಾಯದಿಂ ।
ಸಾಧಿಸುವೆ ನಾನೆ ಮೇಲೆಂದೆನುತ ವಿಧವಿಧದಿ ।
ವಾದವನು ಮಾಡುತಿಹೆಯೆನ್ನೊಡನೆ ಕ್ರೋಧದಿಂ ಮೇದಿನಿಯೊಳವತರಿಸಿದೆ ॥೨೦॥

ಭ್ರಷ್ಟವಾಗದೆ ಜನನ ದುಷ್ಟರೊಳು ಸೇರದೆ ಕ ।
ನಿಷ್ಟ ನಕ್ಷತ್ರದೊಳು ಜನಿಸಿಲ್ಲ ಭೂಭಾರಳಾಗಿ ।
ದುಷ್ಟಳೆಂದೊದರಜೇಡೆನ್ನ ನೀ ಪುಟ್ಟಿದೆನು ನಾ ಶ್ರೇಷ್ಟ ತಾರಕೆಯೊಳು ॥

ಸುಷ್ಟು ಜನುಮದ ನರಗೆ ಪೂರ್ವದ ಸುಕೃತ ಫಲ ।
ದಷ್ಟು ಸಿಗುವುದು ಧನವು ಮಿಕ್ಕಿರುವ ಭಾಗ ಪಾ ।
ಪಿಷ್ಟನಿಗೆ ಮೃಷ್ಟಾನ್ನದೆಂಜಲನು ಭೋಗಿಷ್ಟನುಣ್ಣುವಗೆ ನಾ ಮಾಡಲೇನು ॥೨೧॥

ಶಾರದೆ—

ದಶಕಂಠನೆನ್ನ ವಿದ್ಯೆಯ ತಿಳಿದರೇನು ಧನ ।
ದಸಮ ಸಾಮರ್ಥ್ಯವಂ ಕೊಟ್ಟವಳು ನೀನಲ್ಲ ।
ರಸಿಕನಾದವನು ಬಿಡ ಕುಶಲದಿಂ ಭೋಗಿಸುವ ಬಲದಿ ಶಶಿವದನೆಯುರೊಳು ॥
ವ್ಯಸನವೇಕದರ ನೀ ವಸುಧೆಯೊಳು ದಿಸೆದಿಸೆಗೆ ।
ಪಸರಿ ಪರವಶಳಾಗಿ ಹಸನಾಗಿ ಬಾಳುತಿಹೆ ।
ರಸೆಯ ಧರ್ಮವನಳಿಸಿ ಪಾಪಕೂಪವ ಬೆಳಸಿ ಪೆಸರೆನ್ನ ಕಲುಕುತಿರುವೆ ॥೨೨॥

ಕುಲ ಜಾತಿ ನಿನಗಿಲ್ಲ ನಿಲ್ಲುವರೆ ನೆಲೆಯಾದ ।
ನೆಲವಿಲ್ಲ ಸತ್ಪಾತ್ರ ಧಾರ್ಮಿಕರನಗಲಿರುವೆ ।
ಹೊಲೆಯರೊಳು ಸುಳಿದಾಡಿ ನಲಿಯುತಿಹೆ ಬಲವಂತರಲಿ ಕಲೆತು ಕಳಕಳಿಸುವೆ॥
ಜಲಜಾಕ್ಷ ಶ್ರೀಕೃಷ್ಣ ಹೇಗೊಲಿವ ನಾನರಿಯೆ ।
ಸಲೆ ಪರಿಕಿಸದೆ ನಿನ್ನ ಹುಲುತನದಿ ಮಾತಾಡಿ ।
ಫಲವೇನು ಕಲೆಯ ಮಹಿಮೆಯನರಿತು ವರ್ತಿಸೆಲೆ ಕ್ಷೀರಸಾಗರಕನ್ನಿಕೆ ॥೨೩॥

ಧ್ಯಾನದೊಳು ಮೌನದೊಳು ಜ್ಞಾನದೊಳಗಾಚಾರ ।
ಲೀನರಾಗಿರುವ ಭೂಸುರರು ಮಂತ್ರದಿಂ ನದಿ ।
ಸ್ನಾನದಿಂ ಪೂಜ್ಯರೆಂದೆನಿಪರಿಗೆ ನೀನೊಲಿಯದಿರಲು ಕಾರಣವದೇನು ॥
ಆನನವು ಕುಂದಿ ಬಲು ಹೀನಸ್ಥಿತಿಯನು ಹೊಂದಿ ।
ಮಾನವನು ತೊರೆದು ದುಮ್ಮಾನದೊಳಗಿಹರವ್ವ ।
ದೀನರನು ಕಾಪಾಡು ಸಾನುರಾಗವನು ತೋರಿಸುತ ಕ್ಷೀರೋದತನಯೆ ॥೨೪॥

ಲಕ್ಷ್ಮಿ—

ಬೇಡೆನಗೆ ದ್ವಿಜವರರ ಸಹವಾಸ ಸುಖದಿ ಕಾ ।
ಪಾಡಲಾರೆನು ಸದಾಚಾರಸಂಪನ್ನರನು ।
ನೋಡೆನ್ನ ಧಿಕ್ಕರಿಸಿ ನಿನ್ನನವಲಂಬಿಸುತೆ ಸ್ವಾಭಿಮಾನವನಿಡುವರು ॥
ಬೇಡುವರು ಮನೆಮನೆಗೆ ತಿರುಗುತ್ತ ಯೋಚಿಸುತ ।
ನೋಡಿದರೆ ನಾ ಬೇಕು ಕಡೆಗೆ ಮತ್ಸರದ ಕಡು ।
ಮೂಢರೊಳು ಕೂಡಲಾರೆನೆನ್ನುವುದು ನಿಜ ನೀನಿರಲು ನಾನೇಕವರ್ಗೆ ॥೨೫॥

ಏಸು ಪೇಳಿದರೇನು ಕಾಸಿನಾಶೆಗೆ ಕಪಟ ।
ವೇಷಗಳ ಧರಿಸಿ ಪರದೇಶಗಳ ಸುತ್ತುವರು ।
ಭೂಸುರರು ಲೇಸಾದ ಕಜ್ಜವಂ ಮಾಡುವರೆ ಪೇಳೆನಗೆ ಶಾರದಾಂಬೆ ॥
ದೋಷವಲ್ಲವೆ ಮೋಸಕೃತ್ಯದಿಂ ವಾಸಿಪುದು ।
ನಾಶವಾಗದೆ ಹೇಗೆ ದೇಶದುನ್ನತಿ ಬಹುದು ।
ಭೂಷಣದಿ ಜಯಿಸುವರು ಪುಸಿಭಾಷಣಗಳಿಂದ ಪಂಡಿತರು ಸಾಸಿರಾರು ॥೨೬॥

ಭಕ್ತಿಯಿಂದೆನ್ನನತಿ ಪೂಜಿಸಿರುವವರಿಗೆ ವಿ ।
ರಕ್ತಿಯನು ತೋರಿಸುವೆನಾಗ ಭಾಗ್ಯವನಿತ್ತು ।
ಮುಕ್ತಿಯನು ಪಡೆಯುವರು ಧನದಿಂದ ಯುಕ್ತಿಯಿಂದಘವಿಮುಕ್ತರಾಗುವರು ॥
ಶಕ್ತಿಯನು ನಾನೀವೆ ಲೋಕಕೆ ಸಮಸ್ತವಿಹ ।
ವ್ಯಕ್ತಿಗಳಿಗೆಲ್ಲ ಮೂಲಾಧಾರಿ ಕಲಿಯುಗದ ।
ಉಕ್ತಿಯನು ಮರೆಯುವರೆ ನಿಜವಾದ ಭಕ್ತರಾದವರೆಲ್ಲ ಶಾರದಾಂಬೆ ॥೨೭॥

ಶಾರದೆ—

ಆಶ್ರಯವನಾರಿತ್ತ ಹಿಮಗಿರಿಯೊಳಿಹ ಬದರಿ ।
ಕಾಶ್ರಮ ವನದ ಋಷಿವರರಿಗಾಹಾರ ಗಾಳಿ ।
ಯಾಶ್ರಯವು ಪಸಿವಾಗೆ ಗಡ್ಡೆಗೆಣಸನು ತಿಂದು ಜೀವಿಪುದ ನಾ ಕಂಡೆನು ॥

ನೀ ಶ್ರಮವ ಪಡೆದುದೇನೆಲೆ ರಮಾ ಶ್ರೀ ದೇವ ।
ರಾಶ್ರಯವು ಬೇಕು ನಮಗೆಲ್ಲ ಸದ್ಧರ್ಮ ಸುವಿ ।
ದ್ಯಾಶ್ರಯವನನುಸರಿಸಿ ನಡತೆಯನು ತಿದ್ದಿ ಸನ್ಮಾರ್ಗದೊಳಗಟ್ಟಬೇಕು ॥೨೮॥

ವೃಷ್ಟಿಯನು ಶರಧಿಯನು ಧರೆಯನಾಕಾಶವನು ।
ಸೃಷ್ಟಿಸಿದ ದಾತಾರನಾರೆನ್ನ ಪತಿಯಾದ ।
ಸೃಷ್ಟನಲ್ಲವೆ ಭೂಮಿಯನು ತಲೆಯ ಮೇಲಿಟ್ಟು ಹೊತ್ತವನು ನಾಗೇಶನು ॥
ಕಷ್ಟದಿಂ ಗೇಯುತಿರೆ ಧನ ಬಂದ ಬಳಿಕ ಸಂ ।
ತುಷ್ಟನಾಗುವನು ಮನುಜನಿದರಿಂದ ನಿನಗೇನು ।
ನಷ್ಟವಾಗಿಹುದಿದು ನಿನ್ನುಪಕಾರವಲ್ಲದಿನ್ನಾವುದುಂಟೆಮಗೆ ಬೇರೆ ॥೨೯॥

ಬೆಟ್ಟದೊಳು ಜನಿಸಿರುವ ಪೊದೆ ಪೊದರು ಮರಗಳಿಗೆ ।
ಕೊಟ್ಟು ತಿಂಡಿಯನು ನೀರೆರೆದು ಸಲಹುತಿಹ ಜಗ ।
ಜಟ್ಟಿ ಯಾರವ್ವ ಪಟ್ಟಣಿಗರವುಗಳೆಡೆ ಪೋಗಿ ಕಣ್ಬಿಟ್ಟು ಕಾಣುವರೆ ॥
ದಟ್ಟವಾದಡವಿಯೊಳಗೋಡಾಡುತಿಹ ಮಿಗಕೆ ।
ಕಟ್ಟಿಟ್ಟ ಕಾಸಾರದಲ್ಲಿರುವ ಮತ್ಸ್ಯಾದಿ ।
ಪುಟ್ಟ ಜಲಜಂತುವಿಗೆ ದುಡ್ಡೇಕೆ ನೀನೇಕೆ ಬಾಳಿದೆಯೊ ವ್ಯರ್ಥವಾಗಿ ॥೩೦॥

ಲಕ್ಷ್ಮಿ—

ಪುರುಹೂತನಪ್ಸರಸ್ತ್ರೀಯರೊಳು ಮೆರೆದಿರ್ದ ।
ನುರುತರದ ಸಡಗರದಿ ನಾನಿತ್ತ ಭಾಗ್ಯದಿಂ ।
ಕುರುರಾಯ ಗರ್ವದಿಂ ಜರೆದು ಶ್ರೀಕೃಷ್ಣಪರಮಾತ್ಮನನು ಹೂಂಕರಿಸಿದ ॥
ಸರಸಿಜಕೆ ಝೇಂಕರಿಸಿ ತುಂಬಿಗಳು ಹೊಳೆಯುವಂ ।
ತಿರುವೆ ನಾ ಧರಣಿಯೊಳಗದನೇನು ನೀನರಿತೆ ।
ಚರಿತೆಯನು ಗುಣವ ತಿಳಿದನುಭವಿಸುವವರರಿವರಲ್ಲದಿನ್ನಾರರಿವರು ॥೩೧॥

ಹದಿಬದೆಯ ಪ್ರಹುಥದಿಂದೇನಾಯ್ತು ನೋಡು ದ್ರೌ ।
ಪದಿಯ ಸೀರೆಯನು ಖಳ ದುಶ್ಯಾಸನೆಳೆವಾಗ ।
ಪದುಮನಾಭನ ಕರೆದುದೇಕವ್ವ ಸತಿಶಿರೋಮಣಿಯಾದ ದ್ರುಪದಸುತೆಯು ॥
ಒದಗಿರದೆ ನೀನವಳ ಕಾಪಾಡಲಿಲ್ಲೇಕೆ ।
ಇದಕುತ್ತರವನಿತ್ತು ಬದಲೊಂದು ಮಾತಾಡು ।
ಮೈದುಮಾತಿನಿಂದಾಡಿ ನಿನ್ನ ತಪ್ಪುಗಳ ಮುಚ್ಚಿಡುವೆ ಚದುರತನದಿಂದ
॥೩೨॥

ಭ್ರಮೆಯೇಕೆ ನಿನಗಿನ್ನು ಕೇಳೊಂದು ಮಾತನತಿ ।
ರಮಣೀಯವಾದ ಶ್ರೀ ಕ್ಷೀರಸಾಗರದ ನವ ।
ಕಮಲದೊಳು ಜನಿಸಿದೆನು ಗೋಕುಲಾಧಿಪನೆನ್ನ ಧರ್ಮದಿಂ ಮದುವೆಯಾದ ॥
ಸುಮನಸರು ಬಂದೆಮಗೆ ಮೊರೆಯಿಟ್ಟ ಸಮಯದಲಿ ।
ವಿಮಲಚಿತ್ತದಿ ಭರದಿ ಕಮಲನಾಭನು ಪೋಗಿ ।
ಯಮುನ ಪುರಕಟ್ಟಿದನು ದಾನವರ ಮಥಿಸಿ ನರಸಂದಣಿಯ ಪಾಲಿಸಿದನು
॥೩೩॥

ಶಾರದೆ—

ಭೋಜನೃಪ ಗೀರ್ವಾಣ ಭಾಷೆಯೊಳು ಪಂಡಿತನು ।
ಆಜಿಯಲಿ ರಾಜರಿಂ ಗೆದ್ದಿರುವ ಶ್ರೀ ಧರ್ಮ- ।
ರಾಜನು ತನ್ನ ರಾಜ್ಯದೊಳು ಪ್ರಜೆಗಳಂ ಸಂತತಂ ಪರಿಪಾಲಿಸಿದನು ॥
ಮೂಜಗವ ಜಯಿಸಿದ್ದ ಫಲುಗುಣನ ತೇಜವು ವಿ ।
ರಾಜಿಸಿತು ಸೀತಾಸಮೇತ ಶ್ರೀ ರಘುರಾಮ ।
ರಾಜ ಸಾಕೇತ ಪತ್ತನವನಾಳಿದನು ರಾಜಾ ಪ್ರತ್ಯಕ್ಷ ದೇವತಾ ॥೩೪॥

ಹಣವಿದ್ದ ಮನುಜರ್ಗೆ ಬರಹ ಬೇಡವೆ ರಮಾ ।
ಗಣಿತವನು ಗುಣಿಸುವೆನು ಋಣಋಣನೆ ನಿನ್ನ ನಾ ।
ನೆಣಿಸುವೆನು ಬಾಲ್ಯದೊಳು ವಿದ್ಯೆಯನು ಕಲಿಯದವ ಹೆಣಕೆ ಸಮ ಕಡು
ಮೂಢನು ॥

ಬಣಗು ವಚನದಿ ಕೆಣಕಬೇಡೆನ್ನ ಋಣಿಯಾಗಿ ।
ಅಣಕಿಸುವೆ ಹೆರವರಂ ಗುಣಹೀನೆಳಾಗಿ ನೀ ।
ಹಣವೇನು ಮಾಡುವುದು ಗುಣವಿಲ್ಲವವರಿಗಿನ್ನನುಮಾನವೇಕೆ ನಿನಗೆ ॥೩೫॥

ಇದ್ದೇನು ನೀನಿಲ್ಲದಿದ್ದರೇನೆಲೆ ಕಮಲೆ ।
ವೃದ್ಧಿಯಾಗದ ವಸ್ತು ಬೀಗಮುದ್ರೆಯೊಳಗವಿ ।
ತಿದ್ದ ಕಾಲದೊಳು ತಸ್ಕರರು ಕದ್ದೊಯ್ಯುವರು ನಿನ್ನ ಸದ್ದಿಲ್ಲದಂತೆ ॥
ತಿದ್ದಿಕೋ ನಡತೆಯನು ಮಿತಿಮೀರಿ ನಡೆದಪ್ರ ।
ಬುದ್ಧಳಾಗಿರಬೇಡವೆಂದೆನುತ ವಿನಯದಿಂ ।
ಬುದ್ಧಿವಾದವ ಪೇಳಿಯಿಂದಿರೆಗೆ ಶಾರದೆಯು ಮೌನವಾಗಿದ್ದಳಾಗ ॥೩೬॥

ಸಮಯಕ್ಕೊದಗದ ಅರ್ಥ ಸಾವಿರವಿದ್ದರೂ ವ್ಯರ್ಥ.

ಒಗ್ಗಟ್ಟಿನಲಿ ಬಲವಿದೆ ಎಂಬುದಕ್ಕೆ

ಭಟ್ಟಬಯಲೊಳಗೊಂದು ದಿವಸ ನಾಕೆತ್ತುಗಳು ।
ಒಟ್ಟಾಗಿ ಮೇದಿರ್ಪ ಕಾಲದೊಳು ತಟ್ಟನವು ।
ಸಿಟ್ಟನಿಂ ತಮ್ಮೊಳಗೆ ಜಗಳಾಡಿ ಚೆದರಿದುವು ಸೊಟ್ಟ ಮುಖಮಾಡಿ ದಿಸೆಗೆ ॥
ಕೆಟ್ಟ ಹೆಬ್ಬುಲಿಯು ತಾನದ ಕಂಡು ಕಣ್ಣಿಟ್ಟು ।
ಹೊಟ್ಟೆಗಾಹಾರ ದೊರಕಿತೆಂದೆನುತುಬ್ಬಿ ದನ ।
ದಟ್ಟಿಯನು ರಟ್ಟೆಯನು ಮುರಿದಿಕ್ಕಿ ತಿಂದು ತೇಗಿ ಪೋದುದು ತನ್ನ ಗುಹೆಗೆ ॥೧॥

ಮತ್ತೊಂದು ದಿವಸ ಬದಲೆತ್ತುಗಳು ಕೂಡಿ ಮೇ ।
ಯುತ್ತಲಿರುವುದ ನೋಡಿ ಮತ್ತೆ ವ್ಯಾಘ್ರವು ಗರ್ಜಿ ।
ಸುತ್ತ ತಿನ್ನುವೆನೆನುತ್ತ ತೋಷದಿ ಬರಲು ಸುತ್ತಲಿನ ಪಶುಗಳಾವಳಿಗೆ ॥
ಕತ್ತಿಯಿಂದಿರಿದಂತೆ ತಲೆಯೆತ್ತಿ ವೃಷಭಗಳು ।
ಮುತ್ತಿಗೆಯ ಹಾಕುತ್ತ ಕೋಡಿನಿಂ ತಿವಿಯುತ್ತ ।
ಲತ್ತಿತ್ತ ತಿರುಗುತ್ತ ಮೈಮೇಲೆ ಹಾರುತ್ತಲಿರಲು ಪುಲಿ ಸತ್ತಿತಾಗ ॥೨॥

ಏಕಮತ ಯತ್ನದಿಂದಂಬರವ ಹತ್ತಬಹು ।
ದೇಕಾಗ್ರಚಿತ್ತದಿಂ ನಾಕದೈರಾವತವ ।
ಬೇಕಿರಲು ತರಬಹುದು ಲೋಕಪ್ರಸಿದ್ಧದಾ ಹಿಮಗಿರಿಯನೆತ್ತಬಹುದು ॥
ಬೇಕೆನುತ ಭಾಷೆಯೊಳು ಮನವಿಟ್ಟು ನಮ್ಮಗಳ ।
ನೇಕ ದುರ್ಮತಿಗಳಿಂ ಪಾರಾಗಿ ನಾವೆಲ್ಲ ।
ಸ್ವೀಕರಿಸಿದೊಗ್ಗಟ್ಟು ಕರ್ಣಾಟ ಭಾಷೆಗಾಧಾರವಿದು ಬಹು ಚೋದ್ಯವು ॥೩॥

ಕಣಿಯ ಮುದ್ರಿಕೆ

ರಾಮ ಶ್ರೀ ರಘುರಾಮ ಸಕಲ ಸದ್ಗುಣಧಾಮ ।
ಭೂಮಿಜಾಪತಿ ರಾಮ ವಿಬುಧಗಣನುತ ರಾಮ ।
ಸೋಮಸುಂದರ ರಾಮ ನತಪ್ರೇಮ ಲೋಕಾಭಿರಾಮ ಪದುಮಾಕ್ಷ ರಾಮ ॥
ರಾಮಣೀಯಕ ರಾಮ ಸುಕ್ಷೇಮಕರ ರಾಮ ।
ಕೋಮಲ ಶರೀರ ಸುಖಕರ ಶಾಂತಿಯುತ ರಾಮ ।
ಪಾಮರೋದ್ಧಾರಕ ಘನಶ್ಯಾಮ ವಿಮಲಕಾಮಿತ ವರದಪಾರಮಹಿಮ ॥೧॥

ಕರುಣ ಪಾರಾವಾರ ದುರಿತಗಣ ಪರಿಹಾರ ।
ದುರುಳಖಳಸಂಹಾರ ಭಯದೂರ ಧುರಧೀರ ।
ಪರಮಪಾವನಚರಿತ ನೀರಜಾಕ್ಷ ಗಭೀರ ಭಾರತೋದ್ಧಾರ ವೀರ ॥
ಶರಣರಕ್ಷಕ ನಿನ್ನ ಪದಕಮಲಗಳ ಸ್ಮರಿಸಿ ।
ಬರೆದಿಹೆನು ಶ್ರೀ ಲಕ್ಷ್ಮಿ ಶಾರದೆಯ ಸುಚರಿತೆಯ ।
ನಿರುವ ತಪ್ಪುಗಳನೊಪ್ಪಿಕೊಳುವುದು ಮಮತೆಯಿಂ ಪೊರೆಯುವುದು
ಮರೆಯದೆನ್ನ ॥೨॥

ಶರಧಿಯೊಳಗುಕ್ಕಿ ಬಹ ತೆರೆಯಂತೆ ನೊರೆಯಂತೆ ।
ಮರವನಾಲಿಂಗಿಸಿದ ಬಳಿದ ಮೃದು ಲತೆಯಂತೆ ।
ವರಕವಿತೆಯೆನಗೊಲಿದು ಜಿಹ್ವೆಯೊಳು ನಲಿದಿರಲಿ ಮೇದಿನಿಯೊಳಿರುವ ತನಕ ॥
ಬರೆದ ಕವಿತಾ ರಚನೆ ಕರ್ನಾಟದೇಶದೊಳು ।
ಹರಡಿರಲಿ ತರಣಿ ಕಿರಣವು ಬಿರಿವಂತೆ ಯಶವು ।
ವರಕವಿಗಳಂತೆ ಬರಬೇಕೆನುತ ಬೇಡುವೆನು ಗುರುತೀರ್ಥರೂಪರಲಿ ॥೩॥

ಬುಧಮುಕುಟ ಮಣಿಗಳಿರ ಪದುಮಾಕ್ಷನ ನಯದಿಂ ।
ಮುದದಿ ಶಿವ ಪ್ರೇರೇಪಿಸಿದನೆನ್ನ ಪಣೆಯೊಳಿದು ।
ಮೊದಲು ಲೋಕೇಶ ತಿಲಮಾತ್ರ ಕವಿತಾಲಿಖಿತರೇಖೆಯನೆಳದ ಬಲದಿಂ ॥
ಒದಗಿದೀಗಿನ ನಮ್ಮ ಕನ್ನಡದ ದುಃಸ್ಥಿತಿಯ ।
ಹಧಿ ನೋಡಲೆಂದೆನುತ ಕರ್ಣಾಟ ಜನರಿಗೆ ವಿ ।
ಶದವಾಗಿ ತಿಳಿಯಲೋಸುಗ ಬರೆದ ವಾರ್ಧಿಕ್ಯ ಷಟ್ಪದಿಯೊಳೀ ಕೃತಿಯನು ॥೪॥

ಛಂದಸ್ಸಲಂಕಾರ ಪ್ರಾಸಗಣ ಲಕ್ಷಣಗ ।
ಳೊಂದರಿಯೆನಿಂದುಧರನಲ್ಲಿ ಭಕ್ತಿಯನಿಟ್ಟು ।
ಅಂದದಿಂದೀ ಪುಟ್ಟ ಕಾವ್ಯವಂ ರಚಿಸಿದೆನು ಮಂದಮತಿಯಿಂದ ನಾನು ॥
ಚಂದ ವಿದ್ಯಾವಿಶಾರದರತಿ ಮನವಿಟ್ಟು ನೀ ।
ವಿಂದು ಕವಿತೆಯನೋದಿ ತಪ್ಪಿರುವುದನು ತಿದ್ದಿ ।
ಸಂದೇಹವನು ತೊರೆದು ತಿಳಿಸುವುದು ಮುಂದಿನಚ್ಚಿನ ಪ್ರತಿಗೆ ತಿಳಿದ ಜನರು ॥೫॥

ಫುಲ್ಲನಾಭನ ದಯದಿ ಮೆರೆವ ತೆಂಕ ಕನ್ನಡ ।
ಜಿಲ್ಲೆಯೊಳಗೊಂಡ ಶ್ರೀ ಕಾರಕಳ ತಾಲೂಕಿ ।
ನಲ್ಲಿರುವ ಪುತ್ತಿಗೆಯ ಮಾಗಣೆಗೆ ಸೇರಿರ್ದ ಪಾಲಡ್ಕ ಪಲ್ಲೆ ಮಧ್ಯ ॥
ಸಲ್ಲಗುಳಿ ಸದನದಲಿ ಜನಿಸಿರ್ದ ಶ್ರೀ ರಮಾ ।
ವಲ್ಲಭನ ಪೆಸರಿನಿಂದೆಸೆವ ನಾರಾಯಣನ ।
ನಲ್ಲಸುತನತ್ರೇಯ ಗೋತ್ರದವನಶ್ವಲಾಯನ ಸೂತ್ರ ಕವಿ ಕೃಷ್ಣನು ॥೬॥

ಸಂಪೂರ್ಣಂ